# ಮಂಗಳೂರು ವಿಶ್ವವಿದ್ಯಾನಿಲಯ

ಮಂವಿವಿ/SCSTCell/Sholarship/04/2022-23/SCT4

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ
ದಿನಾಂಕ:11-09-2023

ರಿಗೆ,

ಅಧ್ಯಕ್ಷರು/ಸಂಯೋಜಕರು/ಪ್ರಾಂಶುಪಾಲರು
ಎಲ್ಲಾ ಸ್ನಾತಕೋತ್ತರ ವಿಭಾಗಗಳು/ಘಟಕ ಕಾಲೇಜುಗಳು
ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ//ಜ್ಞಾನ ಕಾವೇರಿ ಚಿಕ್ಕ ಆಳುವಾರ, ತೊರೆನ್ನೂರು.

ಮಾನ್ಯರೆ,

ವಿಷಯ: ಶೈಕ್ಷಣಿಕ ವರ್ಷ 2023-24ನೇ ಸಾಲಿಗೆ ಸ್ನಾತಕೋತ್ತರ ಕೋರ್ಸಿನ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ ಪಡೆಯುವ ಬಗ್ಗೆ.

ಉಲ್ಲೇಖ : 1. ಸರಕಾರದ ಆದೇಶ ಸಂಖ್ಯೆ:SWD/EDU/91/2023(Com:1098854),ಬೆಂಗಳೂರು, ದಿನಾಂಕ : 03.07.2023
2. ಮಂಗಳೂರು ವಿಶ್ವವಿದ್ಯಾನಿಲಯ – ಮಾಹಿತಿ ಪುಸ್ತಕ (Prospectus) 2023-24.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ :08.09.2023

***********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕ ವರ್ಷ2023-24 ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು.. ಸ್ನಾತಕೋತ್ತರ ಕೇಂದ್ರ ಮತ್ತು ಘಟಕ ಕಾಲೇಜುಗಳಲ್ಲಿ ಪ್ರಥಮ/ದ್ವಿತೀಯ ವರ್ಷದ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳದೆ, ಉಚಿತ ಪ್ರವೇಶಾತಿಯನ್ನು ನೀಡುವುದು. (ಉಲ್ಲೇಖ1ರಂತೆ)

ಪರಿಶಿಷ್ಟ ಜಾತಿ /ಪಂಗಡದ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.2.50 ಲಕ್ಷಗಳ ಮಿತಿಯೊಳಗಿರುವ ವಿದ್ಯಾರ್ಥಿಯು ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ. ಕುಟುಂಬದ ವಾರ್ಷಿಕ ವರಮಾನ ರೂ. 2.50 ಲಕ್ಷಗಳಿಗಿಂತ ಮೇಲ್ಪಟ್ಟಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಮಾಹಿತಿ ಪುಸ್ತಕದಲ್ಲಿ ನಿಗದಿಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ.

ಮುಂದುವರೆದು 2023-24 ನೇ ಸಾಲಿನಲ್ಲಿ UUCMS ಮುಖಾಂತರ ಪ್ರವೇಶಾತಿ ನಡೆಯುತ್ತಿದ್ದು,ವಿದ್ಯಾರ್ಥಿಯು ಸದರಿ UUCMS ಮುಖಾಂತರ ಪ್ರವೇಶಾತಿಯನ್ನು ಪಡೆದು University Registration Number ನ್ನು ಪಡೆದು ಕೂಡಲೇ SSP Portal ನಲ್ಲಿ ಕಡ್ಡಾಯವಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿ ಬ್ಯಾಂಕ್ ಖಾತೆಗೆ ಜಮೆಯಾಗುವ/ಯಾಗಬಹುದಾದ ವಿದ್ಯಾರ್ಥಿವೇತನದ ಮೊತ್ತವನ್ನು ಜಮೆಯಾದ 7 ದಿನಗಳೊಳಗಾಗಿ ವಿಶ್ವವಿದ್ಯಾನಿಲಯ ನಿಧಿಗೆ ಕಡ್ಡಾಯವಾಗಿ ಪಾವತಿಸುವಂತೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡು ಪ್ರವೇಶಾತಿ ಯನ್ನು ನೀಡುವುದು. ಹಾಗೂ ಪರಿಶಿಷ್ಟ ಜಾತಿ/ಪಂಗಡ ಘಟಕ ಮತ್ತು ವಸತಿ ನಿಲಯದಿಂದ ಬೇಬಾಕಿ (ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳು) (NOC) ಪತ್ರವನ್ನು ಪಡೆದ ನಂತರವೇ ವಿದ್ಯಾರ್ಥಿಗಳಿಗೆ ಅಂತಿಮ ಅಂಕಪಟ್ಟಿಯನ್ನು ವಿತರಿಸುವುದು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ. (ಮುಚ್ಚಳಿಕೆ ಪತ್ರವನ್ನು ಲಗತ್ತಿಸಲಾಗಿದೆ)

ಸೂಚನೆ : ಪರಿಶಿಷ್ಟ ಜಾತಿ/ ಪಂಗಡದ ವಿದ್ಯಾರ್ಥಿಯು ಕಡ್ಡಾಯವಾಗಿ SSP Portal ನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ,ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯದ ನೋಡಲ್ ಅಧಿಕಾರಿ ಪ್ರೊ. ಪ್ರಕಾಶ್ ಎಮ್. ಗಣಕ ವಿಜ್ಞಾನ ವಿಭಾಗ ಇವರನ್ನು ಸಂಪರ್ಕಿಸಬಹುದು.

ತಮ್ಮ ವಿಶ್ವಾಸಿ

ಕುಲಸಚಿವರು
11/9/23

Scanned with OKEN Scanner

ಪ್ರತಿ:

1. ಕುಲಸಚಿವರು (ಪರೀಕ್ಷಾಂಗ) ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.
2. ಗ್ರಂಥಪಾಲಕರು, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.
3. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ .
4. ನಿರ್ದೇಶಕರು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ ದೈಹಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ/ಕಾಲೇಜು ಅಭಿವೃದ್ಧಿ ಮಂಡಳಿ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.
5. ಅಧ್ಯಾಪಕ ಸಲಹೆಗಾರರು, ಪುರುಷರ/ಮಹಿಳೆಯರ/ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ./ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಆಳುವಾರ ತೊರೆನ್ನೂರು.
6. ಉಪಕುಲಸಚಿವರು ,ಮಂಗಳೂರು ವಿಶ್ವವಿದ್ಯಾನಿಲಯ ,ಮಂಗಳಗಂಗೋತ್ರಿ
7. ವಿಶೇಷಾಧಿಕಾರಿ ಪರಿಶಿಷ್ಟ ಜಾತಿ ಮತ್ತು ಪಂಗಡ ಘಟಕ/ಸಹಾಯಕ ಕುಲಸಚಿವರುಗಳುಸಹಾಯಕ ಹಣಕಾಸು ಅಧಿಕಾರಿ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.
8. ಎಲ್ಲಾ ಕಚೇರಿಯ ಅಧೀಕ್ಷಕರುಗಳಿಗೆ, ಮಂಗಳೂರು ವಿಶ್ವವಿದ್ಯಾನಿಲಯ.
9. ಮಾನ್ಯ ಕುಲಪತಿ/ಕುಲಸಚಿವರ ,ಆಪ್ತ ಸಾಹಯಕರು ಮಂಗಳೂರು ವಿಶ್ವವಿದ್ಯಾನಿಲಯ ,ಮಂಗಳಗಂಗೋತ್ರಿ.

Scanned with OKEN Scanner